# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ 07 ಬ್ಯಾಟರಾಯನಪುರ ವಾರ್ಡ್ ಸಮಿತಿ ಸಭೆಯ ನಡವಳಿ.

ದಿನಾಂಕ 05.03.2022 ರಂದು ವಾರ್ಡ್ ಕಛೇರಿಯಲ್ಲಿ ಬೆಳ್ಳಿಗೆ 11.00 ಕ್ಕೆ ನೋಡಲ್ ಅಧಿಕಾರಿಗಳ ಸಮಕ್ಷಮದಲ್ಲಿ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ವಾರ್ಡ್ ನಂ.07, ಬ್ಯಾಟರಾಯನಪುರ ವಾರ್ಡ್‌ಗೆ ಮಾನ್ಯ ಆಯುಕ್ತರ ಆದೇಶದಂತೆ ನೋಡಲ್ ಅಧಿಕಾರಿಯಾಗಿ ನಿಯೋಜಿಸಲಾಗಿರುವ ಶ್ರೀ.ಪ್ರಕಾಶ್.ಜಿ ರವರು ಸಭೆಯಲ್ಲಿ ಹಾಜರಿದ್ದು, ಈ ಹಿಂದಿನ ಸಭೆಯ ನಡುವಳಿಗಳ ಬಗ್ಗೆ ಗಮನ ಹರಿಸಿ, ಕೈಗೊಂಡ ಕ್ರಮದ ಬಗ್ಗೆ ಚರ್ಚಿಸಲಾಯಿತು.

1. **ಘನತ್ಯಾಜ್ಯ ನಿರ್ವಹಣೆ:**
   1. ವಾರ್ಡ್ 07 ರಲ್ಲಿ ಘಣತ್ಯಾಜ್ಯಾ ನಿರ್ವಹಣೆಗೆ ಸಂಬಂದಿಸಿದಂತೆ ಹೆಚ್ಚುವರಿ ಪೌರಕಾರ್ಮಿಕರನ್ನು ನಿಯೋಜಿಕೊಳ್ಳುವ ಕಡತ ಪ್ರಸುತ್ತ ವಿಶೇಷ ಆಯುಕ್ತರು ಘ.ನಿ ಬಿಬಿಎಂಪಿ ರವರ ಕಛೆರಿಯಲ್ಲಿ ಇರುವುದಾಗಿ ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಸಿರುತ್ತಾರೆ.
   2. ಘಣತ್ಯಾಜ್ಯಾ ನಿರ್ವಹಣೆಗೆ ಸಂಬಂದಿಸಿದಂತೆ, ವಾರ್ಡ್‌ನಲ್ಲಿ ಹಸಿ/ಒಣ ತ್ಯಾಜ್ಯಾ ವಿಂಗಡಣೆ ಸಂಪರ್ಕವಾಗಿ ನಡೆಯುತ್ತಿರುವುದಿಲ್ಲ ಎಂದು ತಿಳಿಸಿರುತ್ತಾರೆ.
2. **ಆರೋಗ್ಯ ಇಲಾಖೆ:**
   1. ವಾರ್ಡ್ ವ್ಯಾಪ್ತಿಯಲ್ಲಿ ಬ್ಲಾಕ್ ನಲ್ಲಿ ಇರುವ Bulk generators and commercial establishme nts and apartments doing wet composting at their premises ಬಗ್ಗೆ ಮಾಹಿತಿಯನ್ನು ನೀಡಲು ಸಭೆಯಲ್ಲಿ ಮನವಿ ಮಾಡಲಾಯಿತು.
3. **ಕಾಮಗಾರಿ ವಿಭಾಗ:**
   1. ರಸ್ತೆಗಳಲ್ಲಿ ಎಲ್ಲೆ ಆಗಲೀ ರಸ್ತೆ ಗುಂಡಿಗಳು ಕಂಡು ಬಂದರೆ ಕೂಡಲೇ ವಾರ್ಡ್ ಕಛೇರಿಗೆ ತಿಳಿಸಲು ಸೂಚಿಸಿದೆ.
   2. ಕಾಶಿನಗರ/ಮೀಸೆ ಹನುಮಂತಪ್ಪ ಬಡಾವನೇಯ ರಸ್ತೆಗಳನ್ನು ಒಳಚರಂಡಿ ಸಂಪರ್ಕಕ್ಕಾಗಿ ರಸ್ತೆಗಳನ್ನು ಅಗೆದಿರುವ ರಸ್ತೆಗಳಿಗೆ ಕಾಂಕ್ರಿಟ್ ಹಾಕುವ ಕೆಲಸವನ್ನು ಶೀಘ್ರದಲ್ಲಿ ನಿರ್ವಹಿಸಿಕೊಡುವುದಾಗಿ ತಿಳಿಸಲಾಯಿತು.
4. **ವಿದ್ಯುತ್ (ಬೀದಿ ದೀಪಗಳ ನಿರ್ವಹಣೆ) ವಿಭಾಗ:**
   1. ಬೀದಿ ದೀಪಗಳ ನಿರ್ವಹಣೆ ಅತ್ಯಂತ ಪ್ರಮುಖವಾದ ಕೆಲಸವಾಗಿದ್ದು, ಬೀದಿ ದೀಪಗಳನ್ನು ಅದಷ್ಟು ಸುಸ್ಥಿತಿಯಲ್ಲಿಡುವುದು. ಪಂಪಾ ಬಡಾವಣೇ ಮತ್ತು ಬ್ಯಾಟರಾಯನಪುರ ಅಯ್ಯಪ್ಪ ದೇವಸ್ಥಾನದ ರಸ್ತೆಯಲ್ಲಿ ಬೀದಿ ದೀಪಗಳ ಕೊರತೆವಿರುವುದಾಗಿ ತಿಳಿಸಿರುತ್ತಾರೆ.

2. ವಾರ್ಡ್ ವ್ಯಾಪ್ತಿಯಲ್ಲಿ ಆಳವಡಿಸಲಾಗಿರುವ ಎಲ್.ಇ.ಡಿ ವಿದ್ಯುತ್ ದೀಪಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವುದರ ಬಗ್ಗೆ ಕ್ರಮವಹಿಸುವುದು.
3. ವಾರ್ಡ್ ಕಛೇರಿಯ ಆವರಣದಲ್ಲಿ ಒಂದು ವಿದ್ಯುತ್ ದೀಪವನ್ನು ಅಳವಡಿಸಬೇಕೆಂದು ತಿಳಿಸಲಾಯಿತು.

5. **<u>ಕಂದಾಯ ವಿಭಾಗ:</u>**

1. ವಾರ್ಡ್ ವ್ಯಾಪ್ತಿಯಲ್ಲಿನ ಕಂದಾಯ ಪಾವತಿಯನ್ನು ಬಾಕಿ ಉಳಿಸಿಕೊಂಡಿರುವ ಪ್ರಮುಖ ಸಂಸ್ಥೆಗಳನ್ನು ಗುರುತಿಸಿ ಇವುರುಗಳಿಂದ ಕಂದಾಯವನ್ನು ವಸೂಲಿ ಮಾಡಲು ಸೂಕ್ತ ಕ್ರಮಕೈಗೊಳ್ಳಲುವುದು.

6. **<u>ಜಲಮಂಡಳಿ ವಿಭಾಗ:</u>**

1. ಬ್ಯಾಟರಾಯನಪುರದಲ್ಲಿ ಸ್ಯಾನಿಟರಿ ಚೇಂಬರ್‌ಗಳು ಹೆಚ್ಚಾಗಿ ಮಣ್ಣಿನಿಂದ ತುಂಬಿದ್ದು, ಇವುಗಳನ್ನು ಸುವುಗೊಳಿಸಿಕೊಡಬೇಕೆಂದು ಮನವಿ ಮಾಡಿದರು. ಅದರಂತೆ ರಾಜೇಶ್ ಬಿಡ್ಲುಎಸ್ಎಸ್‌ಬಿ ವಿಭಾಗದವರು ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.
2. ಬ್ಯಾಟರಾಯನಪುರ ಗ್ರಾಮಠಾಣದ ಭಾಗದಲ್ಲಿ ಹೊಸದಾಗಿ ಒಳಚರಂಡಿ ಸಂಪರ್ಕವನ್ನು ಕಲ್ಪಿಸಲು ಮನವಿ ಮಾಡಿರುತ್ತಾರೆ.
3. ಕಾಫಿ ಬೋರ್ಡ್ ಬಡಾವಣೆಯಲ್ಲಿನ 03ನೇ ಮುಖ್ಯ ರಸ್ತೆಯಲಿನ 4-5 ಮನೆಗಳಿಗೆ ಕುಡಿಯುವ ನೀರು ಸರಬರಾಜು ಇಲ್ಲದೆ ವಿರುವ ಬಗ್ಗೆ ಕ್ರಮವಹಿಸಲು ಮನವಿ ಮಾಡಿರುತ್ತಾರೆ. ಸದರಿ ವಿಷಯದ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ಇರುವ ಬಗ್ಗೆ ದೂರುದಾರರ ಬೇಸರ ವ್ಯಕ್ತ ಪಡಿಸಿರುತ್ತಾರೆ.
4. ನೇತಾಜಿನಗರ 1ನೇ ಮುಖ್ಯ ರಸ್ತೆಯಲ್ಲಿ ಒಳಚರಂಡಿ ಸಂಪರ್ಕ ಕಲ್ಪಿಸುವ ಕಾಮಗಾರಿಯನ್ನು ದಿನಾಂಕ:08.03.2022 ರೊಳಗಾಗಿ ಪ್ರಾರಂಬಿಸುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ರವರು ತಿಳಿಸಿರುತ್ತಾರೆ.

7. **<u>ತೋಟಗಾರಿಕೆ:</u>**

<u>1.</u> ಉದ್ಯಾನವನಗಳಲ್ಲಿ ಉಪವಿಭಾಗ ಕಛೇರಿಯಿಂದ ನಿರ್ಮಿಸಲಾದ ಶ್ರಡೆರ್ ಕೋಠಡಿಗಳನ್ನು, ತೋಟಗಾರಿಕೆ ಇಲಾಖೆಗೆ ಹಸ್ತಾಂತರಿಸಲಾಗಿದೆ. ಅಲ್ಲದೆ ಇವುಗಳ ನಿರ್ವಹಣೆಗಾಗಿ ಅನುದಾನವನ್ನು ಸಹಾ ಕಾಯ್ದಿರಿಸಲಾಗಿದೆ. ಆದರೆ ಪ್ರಸುತ್ತ ಸಹಾಕಾರನಗರ ಉದ್ಯಾನವನ ಮಾತ್ರ ಶ್ರಡೆರ್ ಕೋಠಡಿಯ ನಿರ್ವಹಣೆ ಮಾಡಲಾಗುತ್ತಿದ್ದು, ತ್ವರಿತ ಗತಿಯಲ್ಲಿ ಕಾಪಿ ಬೋರ್ಡ್ ಬಡಾವಣೇಯಲ್ಲಿ ಕಾರ್ಯರಂಬ ಮಾಡಿಕೊಡಬೇಕೆಂದು ಮನವಿ ಮಾಡಿರುತ್ತಾರೆ. ಸದರಿ ವಿಷಯದ ಬಗ್ಗೆ ಸೂಕ್ತ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ವಾರ್ಡ್ ಸಮಿತಿ ಸಭೆಗೆ ಮಾಹಿತಿ ನೀಡಲು ಮನವಿ ಮಾಡಿರುತ್ತಾರೆ.

Ashwini.N.D.
ಕಾರ್ಯದರ್ಶಿ
ವಾರ್ಡ್ 07